ಎಂ.ವಿ.ಸಿ. 953/2022,      ಆರ್.ಡಬ್ಲ್ಯೂ-2          ಹೆಸರುಃ ಚೇತನ್ ವಡವಡಗಿ

**ದಿಃ18-06-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಎಸ್.ವಿ. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಕೆ.ಎ.08/7622 ರ ಟಾಟಾ ಎ.ಸಿ. ವಾಹನಕ್ಕೆ ಸಂಬಂಧಿಸಿದ ವಿಮಾ ಪಾಲಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್.2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ ಪಿ.ಆರ್. ವಕೀಲರಿಂದ**

2. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ, ದಾಖಲಾತಿಗಳ ಅಧಾರದಲ್ಲಿ ಅಪಘಾತದ ಕುರಿತು ಮಾಹಿತಿ ಇದೆ. ಪೊಲೀಸ್ ದಾಖಲಾತಿಗಳು ಮತ್ತು ನಮ್ಮ ಕಂಪನಿಯವರು ನೀಡಿರುವ ಇತರೆ ದಾಖಲಾತಿಗಳ ಆಧಾರದಲ್ಲಿ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ. ನಾವು ತಕರಾರನ್ನು ಸಲ್ಲಿಸುವ ಪೂರ್ವದಲ್ಲಿ ನಮ್ಮ ವಿಮಾ ಕಂಪನಿಯಿಂದ ಅಪಘಾತದ ನೈಜತೆಯ ಕುರಿತು ದಾಖಲಾತಿಗಳನ್ನು ಪಡೆಯುವ ಸಲುವಾಗಿ ನಮ್ಮ ವಿಮಾ ಕಂಪನಿಯಿಂದ ಖಾಸಗಿಯಾಗಿ ತನಿಖಾ ವರದಿಯನ್ನು ಪಡೆದುಕೊಳ್ಳುತ್ತೇವೆ. ತನಿಖಾಧಿಕಾರಿಗಳು ಅಪಘಾತದ ಕುರಿತು ತನಿಖೆಯನ್ನು ಮಾಡಿ ಕೆ.ಎ.08/7622 ರ ವಾಹನದ ಚಾಲಕನ ತಪ್ಪಿನಿಂದ ಅಪಘಾತ ಏರ್ಪಟ್ಟಿರುತ್ತದೆ ಎಂದು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ತನಿಖಾಧಿಕಾರಿಗಳು ಮೃತರ ಕುಟುಂಬದವರಿಗೆ ಹಾಗೂ ಗಾಯಾಳುವಿಗೆ ಪರಿಹಾರ ಕೊಡಿಸುವ ಸಲುವಾಗಿ ಅವರೊಂದಿಗೆ ಷರೀಕಾಗಿ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದು ಹೇಳುತ್ತಾರೆ. ತನಿಖಾಧಿಕಾರಿಗಳು ಸಲ್ಲಿಸಿರುವ ದೋಷಾರೋಪಣ ಪಟ್ಟಿಯನ್ನು ಪ್ರಶ್ನಿಸಿ ಸದರಿ ದೋಷಾರೋಪಣ ಪಟ್ಟಿಯನ್ನು ರುದ್ದುಪಡಿಸುವಂತೆ ಯಾವುದೆ ಕಾನೂನಿನ ಕ್ರಮವನ್ನು ನಮ್ಮ ಕಂಪನಿಯ ಪರವಾಗಿ ತೆಗೆದುಕೊಂಡಿಲ್ಲ. ಮೃತರ ಕುಟುಂಬದವರಿಗೆ ಹಾಗೂ ಗಾಯಾಳುವಿಗೆ ಪರಿಹಾರವನ್ನು ನೀಡುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷ್ಯದ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಏರ್ಪಟ್ಟ ಕಾಲಕ್ಕೆ ಕೆ.ಎ.08/7622 ರ ವಾಹನಕ್ಕೆ ವಿಮೆ ಇತ್ತು ಹಾಗೂ ಸದರಿ ವಾಹನದ ಚಾಲಕನಿಗೆ ಚಾಲನಾ ಪರವಾನಗಿ ಇತ್ತು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ